The Holy See

# ವಿಶ್ವಗುರು ಪೋಪ್ ಫ್ರಾನ್ಸಿಸ್‌ರವರ ಸಂದೇಶ

## ವಿಶ್ವ ಸುವಾರ್ತಾ ಪ್ರಸಾರ ಭಾನುವಾರ-2024

## 20 ಅಕ್ಟೋಬರ್ 2024

**ಹೋಗಿರಿ, ಎಲ್ಲರನ್ನೂ ಉತ್ಸವಕ್ಕೆ ಆಹ್ವಾನಿಸಿ** (ಮತ್ತಾ 22:9)

ಆತ್ಮೀಯ ಸಹೋದರ ಸಹೋದರಿಯರೇ,

ಈ ವರ್ಷದ ವಿಶ್ವ ಸುವಾರ್ತ ಪ್ರಸಾರ ಭಾನುವಾರಕ್ಕಾಗಿ ನಾನು ಆಯ್ಕೆಮಾಡಿದ ವಿಷಯ, ವಿವಾಹ ಮಹೋತ್ಸವದ ಸಾಮತಿಯಿಂದ ತೆಗೆದುಕೊಳ್ಳಲಾಗಿದೆ (ಮತ್ತಾ 22:1-14). ಅತಿಥಿಗಳು ರಾಜನ ಆಹ್ವಾನವನ್ನು ನಿರಾಕರಿಸಿದ ನಂತರ, ಸಾಮತಿಯ ಮುಖ್ಯ ಪಾತ್ರಧಾರಿ, ರಾಜ ತನ್ನ ಸೇವಕರಿಗೆ, "ನೀವು ಹೆದ್ದಾರಿಗಳಿಗೆ ಹೋಗಿ ಕಂಡಕಂಡವರನ್ನೆಲ್ಲಾ ಉತ್ಸವಕ್ಕೆ ಕರೆಯಿರಿ" (ವ 9) ಎಂದು ಹೇಳುತ್ತಾನೆ. ಸಾಮತಿಯ ಈ ವಾಕ್ಯದ ಹಾಗೂ ಯೇಸುವಿನ ಸ್ವಂತ ಜೀವನದ ಬಗ್ಗೆ ಧ್ಯಾನಿಸಿದಾಗ, ಸುವಾರ್ತ ಪ್ರಸಾರದ ಅನೇಕ ಅಂಶಗಳು ಗ್ರಹಿಕೆಗೆ ಬರುತ್ತವೆ. ಕ್ರಿಸ್ತನ ಸುವಾರ್ತಾ ಪ್ರಸಾರ ನಿಯೋಜಿತ ಶಿಷ್ಯರಾದ ನಮಗೆಲ್ಲರಿಗೂ ಇವು ವಿಶೇಷವಾಗಿ ಮತ್ತು ಸಮಯೋಚಿತವಾಗಿ ಗೋಚರಿಸುತ್ತವೆ, ಹಾಗೂ ಈ ಅಂತಿಮ ಹಂತದ ಸಿನೊಡಲ್ ಪ್ರಯಾಣದ ಸಮಯದಲ್ಲಿ, ಅದರ ಧ್ಯೇಯ ವಾಕ್ಯವಾದ "ಸಹಭಾಗಿತ್ವ, ಪಾಲ್ಗೊಳ್ಳುವಿಕೆ, ಸೇವಾನಿಯೋಗ" ಈ ಪ್ರಸ್ತುತ ಪ್ರಪಂಚದಲ್ಲಿ ಧರ್ಮಸಭೆಯನ್ನು ತನ್ನ ಪ್ರಾಥಮಿಕ ಕಾರ್ಯವಾದ ಸುವಾರ್ತ ಪ್ರಸಾರದ ಮೇಲೆ ಕೇಂದ್ರೀಕರಿಸಲು ಕೋರುತ್ತದೆ.

**1. "ಹೋಗಿ ಮತ್ತು ಆಹ್ವಾನಿಸಿ": ಈ ಸೇವಾನಿಯೋಗ, ಹೊರಗೆ ಹೋಗಿ ಪ್ರಭುವಿನ ಔತಣಕೂಟಕ್ಕೆ ಇತರರನ್ನು ಆಹ್ವಾನಿಸಲು ದಣಿವರಿಯದ ಆಹ್ವಾನ.**

ರಾಜ ಸೇವಕರಿಗೆ ಕೊಟ್ಟ ಆಜ್ಞೆಯಲ್ಲಿ ಸುವಾರ್ತ ಪ್ರಸಾರ ನಿಯೋಗದ “ಹೋಗಲು” ಮತ್ತು "ಆಹ್ವಾನಿಸಲು" ಎಂಬ ಎರಡು ಕ್ರಿಯಾಪದಗಳು ಕಾಣಸಿಗುತ್ತವೆ.

ಮೊದಲನೆಯದಕ್ಕೆ ಸಂಬಂಧಿಸಿದಂತೆ, ಅತಿಥಿಗಳಿಗೆ ರಾಜನ ಆಹ್ವಾನವನ್ನು ತಲುಪಿಸಲು ಸೇವಕರನ್ನು ಮೊದಲೇ ಕಳುಹಿಸಲಾಗಿದೆ ಎಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು (ವ 3-4). ಈ ಸೇವಾನಿಯೋಗ ಹೊರಗೆ ಹೋಗಿ ದೇವರನ್ನು ಎದುರುಗೊಂಡು, ಅವರೊಂದಿಗೆ ಸಹಭಾಗಿತ್ವದಲ್ಲಿ ಒಂದಾಗಲು ಎಲ್ಲಾ ಸ್ತ್ರೀ-ಪುರುಷರನ್ನು ದಣಿವರಿಯದೆ ಆಹ್ವಾನಿಸಲು ಕರೆ ಕೊಡುತ್ತದೆ. ಮಾನವನ ಉದಾಸೀನತೆ ಅಥವಾ ಅಲಕ್ಷ್ಯವನ್ನು ಲೆಕ್ಕಿಸದೆ, ಕರುಣಾಮಯಿ ದೇವರು ತಮ್ಮ ಅಪಾರ ಪ್ರೀತಿಯಲ್ಲಿ ನಿರಂತರವಾಗಿ ಎಲ್ಲಾ ಸ್ತ್ರೀ-ಪುರುಷರನ್ನು ತಮ್ಮ ಸಾಮ್ರಾಜ್ಯದ ಸಂತೋಷದಲ್ಲಿ ಭಾಗಿಯಾಗಲು ಕರೆಯುತ್ತಾರೆ. ಯೇಸು ಕ್ರಿಸ್ತರು ಉತ್ತಮ ಕುರಿಗಾಹಿ ಹಾಗೂ ಪಿತನ ಸಂದೇಶಕಾರರಾಗಿ ಇಸ್ರಯೆಲ್ ಜನಾಂಗದ ಕಳೆದು ಹೋದ ಕುರಿಮರಿಗಳನ್ನು ಹುಡುಕಿ ಹೋದರು ಮತ್ತು ಮುಂದುವರೆಸಿ ಈ ಮಂದೆಗೆ ಸೇರದ, ಪಿತನಿಂದ ದೂರವಿರುವ ಕುರಿಗಳನ್ನೂ ಹುಡುಕಿಕೊಂಡು ಹೋದರು (ಯೊವಾ 10:16). ಅವರ ಪುನರುತ್ಥಾನದ ಮೊದಲು ಮತ್ತು ನಂತರ, ತಮ್ಮ ಶಿಷ್ಯರಿಗೆ, "ಹೋಗಿರಿ" ಎಂದು ಹೇಳಿ ಕಳುಹಿಸಿದರು, ಹೀಗೆ ಅವರನ್ನು ತಮ್ಮ ಸ್ವಂತ ಸುವಾರ್ತ ಪ್ರಸಾರ ನಿಯೋಗದಲ್ಲಿ ತೊಡಗಿಸಿಕೊಂಡರು (ಲೂಕ 10:3; ಮಾರ್ಕ 16:15). ಧರ್ಮಸಭೆ ಪ್ರಭುವಿನಿಂದ ಸ್ವೀಕರಿಸಿದ ಸುವಾರ್ತ ಪ್ರಸಾರದ ಆದೇಶಕ್ಕೆ ಬದ್ಧವಾಗಿ ವಿಶ್ವದ ಕಟ್ಟಕಡೆಯವರೆಗೂ ಹೋಗಿ ಶುಭಸಂದೇಶವನ್ನು ಸಾರಿತು, ಮಾತ್ರವಲ್ಲ, ಎದೆಗುಂದದೆ ಎಲ್ಲಾ ಕಷ್ಟಗಳನ್ನು ಹಾಗೂ ಅಡೆತಡೆಗಳನ್ನು ಎದುರಿಸಿ, ಬಳಲಿ ಬೆಂಡಾಗದೆ ಮರಳಿ, ಮತ್ತೆಮತ್ತೆ ಸಾರಲು ಹೊರಟಿತು.

ಕ್ರಿಸ್ತರ ಕರೆಗೆ ಓಗೊಟ್ಟು ಸುವಾರ್ತೆಯನ್ನು ಇನ್ನೂ ಸ್ವೀಕರಿಸದ ಜನರ ಮಧ್ಯೆ ಅಥವಾ ಇತ್ತೀಚೆಗೆ ಸ್ವೀಕರಿಸಿದ ಸ್ಥಳಗಳಿಗೆ ತಮ್ಮ ತಾಯ್ನಾಡನ್ನು ಬಿಟ್ಟು ದೂರ ಹೋದ ಎಲ್ಲ ಸುವಾರ್ತಾ ಪ್ರಚಾರಕರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆತ್ಮೀಯ ಸ್ನೇಹಿತರೇ, ನಿಮ್ಮ ಉದಾರ ಸಮರ್ಪಣೆ ಯೇಸು ತಮ್ಮ ಎಲ್ಲಾ ರಾಷ್ಟ್ರಗಳ (*ಆದ್ ಜೆನ್ತೆಸ್*) ಶಿಷ್ಯರಿಗೆ ಕೊಟ್ಟ ಆದೇಶ: "ಹೋಗಿ ಮತ್ತು ಎಲ್ಲಾ ರಾಷ್ಟ್ರಗಳ ಜನರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ" (ಮತ್ತಾ 28:19) ಎಂಬ ಆದೇಶಕ್ಕೆ ಸುಸ್ಪಷ್ಟವಾದ ಅಭಿವ್ಯಕ್ತಿ. ನಾವು ನಿಮಗಾಗಿ ಪ್ರಾರ್ಥಿಸುವುದನ್ನು ಮುಂದುವರಿಸುತ್ತೇವೆ ಮತ್ತು ಭೂಲೋಕದ ಕಟ್ಟಕಡೆಯವರೆಗೂ ಸುವಾರ್ತೆಯನ್ನು ಸಾರುವ ಕಾರ್ಯಕ್ಕಾಗಿ ಹೊಸ ಹಾಗೂ ಹಲವಾರು ಸುವಾರ್ತಾ ಪ್ರಸಾರಕ ದೈವಕರೆಗಳಿಗಾಗಿ ದೇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಜಾಗತಿಕ ಮಟ್ಟದಲ್ಲಿ ಪ್ರತಿಯೊಬ್ಬ ಕ್ರೈಸ್ತ ಭಕ್ತ ಸುವಾರ್ತೆಗೆ ಸಾಕ್ಷಿ ನೀಡಲು ಪ್ರತಿಯೊಂದು ಸಂದರ್ಭದಲ್ಲೂ ತನ್ನದೇ ಆದ ರೀತಿಯಲ್ಲಿ ಪಾಲ್ಗೊಳ್ಳಲು ಕರೆ ಹೊಂದಿದವರಾಗಿರುತ್ತಾರೆ ಎಂಬುದನ್ನು ನಾವು ಮರೆಯಬಾರದು; ಹೀಗೆ ಇಡೀ ಧರ್ಮಸಭೆ ತನ್ನ ಪ್ರಭು ಮತ್ತು ಬೋಧಕರೊಂದಿಗೆ "ಕೂಡುಹಾದಿಗಳಿಗೆ" ನಿರಂತರವಾಗಿ ಸಾಗಲು ಸಾಧ್ಯ. ಇಂದಿನ ಧರ್ಮಸಭೆಯಲ್ಲಿ ನಡೆಯುತ್ತಿರುವ ದೃಶ್ಯವೇನೆಂದರೆ: ಯೇಸು ಬಾಗಿಲ ಬಳಿ ನಿಂತು ತಟ್ಟುತ್ತಾ ಇದ್ದಾರೆ, ಅದೂ ಒಳಗಿನಿಂದ; ನಾವು ಅವರನ್ನು ಹೊರಗೆ ಬಿಡಬೇಕೆಂಬುದೇ ಅವರ ಇಚ್ಛೆ. ಹಲವು ಬಾರಿ ನಾವು ಪ್ರಭುವನ್ನು ಹೊರಗೆ ಬಿಡದೆ 'ಬಂಧನ'ದಲ್ಲಿಡುತ್ತೇವೆ; ಹೀಗೆ ನಾವು ಅವರನ್ನು 'ನಮ್ಮವರನ್ನಾಗಿ' ಉಳಿಸಿಬಿಡುತ್ತೆವೆ; ಆದರೆ ಪ್ರಭು ಬಂದುದು ಸುವಾರ್ತ ಪ್ರಸಾರ ನಿಯೋಜಿತರಾಗಿ ಮತ್ತು ನಾವು ಸಹ ಸುವಾರ್ತ ಪ್ರಸಾರಕರಾಗಬೇಕೆಂದು ಬಯಸುತ್ತಾರೆ. (*ಜನಸಾಮಾನ್ಯ, ಕುಟುಂಬ ಮತ್ತು ಜೀವದ ಪೋಂಟಿಫಿಕಲ್ ಆಯೋಗದ ಸಭೆ, 18 ಫೆಬ್ರವರಿ 2023*). ದೀಕ್ಷಾಸ್ನಾನ ಪಡೆದ ನಾವೆಲ್ಲರೂ, ನಮ್ಮ ಕರೆಗೆ ಮತ್ತು ಜೀವನದ ಅಂತಸ್ತಿಗೆ ಅನುಗುಣವಾಗಿ ಆದಿ ಧರ್ಮಸಭೆಯಲ್ಲಿ ಇದ್ದ ಹುರುಪಿನಂತೆ ಸುವಾರ್ತ ಪ್ರಸಾರದ ಚಳುವಳಿಯನ್ನು ಹೊಸದಾಗಿ ಪ್ರಾರಂಭಿಸಲು ಸಿದ್ಧರಾಗಬೇಕಿದೆ!

ಸಾಮತಿಯಲ್ಲಿ ರಾಜನ ಆಜ್ಞೆಯನ್ನು ಮತ್ತೊಮ್ಮೆ ಗಮನಿಸಿ ನೋಡೋಣ. ಅವನು ತನ್ನ ಸೇವಕರಿಗೆ "ಹೋಗಿರಿ" ಎಂದು ಹೇಳಿದ್ದು ಮಾತ್ರವಲ್ಲ, ಜೊತೆಗೆ "ಆಹ್ವಾನಿಸಲು" ಕೂಡ ಹೇಳುತ್ತಾ, "ವಿವಾಹ ಉತ್ಸವಕ್ಕೆ ಬೇಗ ಬನ್ನಿ" (ಮತ್ತಾಯ 22:4) ಎನ್ನುತ್ತಾನೆ.

ಇಲ್ಲಿ ನಾವು ದೇವರಿಂದ ನಿಯೋಜಿಸಲಾದ ಈ ನಿಯೋಗದ ಇನ್ನೊಂದು ಮಗ್ಗಲನ್ನು ಕಾಣಬಹುದು ಮತ್ತು ಅದು ಕ್ಷುಲ್ಲಕವಾದುದು ಎಂದು ಊಹಿಸಬಾರದು. ಏಕೆಂದರೆ, ಸೇವಕರು ರಾಜನ ಆಹ್ವಾನವನ್ನು ತುರ್ತಾಗಿ, ಬಹಳ ಗೌರವ ಮತ್ತು ಸೌಜನ್ಯದಿಂದ ತಿಳಿಸಿದರು. ಅದೇ ರೀತಿಯಲ್ಲಿ, ಪ್ರತಿಯೊಬ್ಬರಿಗೆ ಸುವಾರ್ತೆಯನ್ನು ಸಾರುವಾಗ ಅವರದೇ "ಶೈಲಿ"ಯನ್ನು ಅಗತ್ಯವಾಗಿ ಅನುಕರಿಸಬೇಕು. "ಶಿಲುಬೆಯ ಮೇಲೆ ಸತ್ತು ಪುನರುತ್ಥಾನರಾದ ಯೇಸು ಕ್ರಿಸ್ತರಲ್ಲಿ ನಮ್ಮ ರಕ್ಷಣಾ ಪ್ರೀತಿಯ ಸೌಂದರ್ಯ ಪ್ರಕಟವಾಯಿತು" (*ಇವಾಂಜೆಲಿ ಗೌಡಿಯುಮ್*, 36). ಸುವಾರ್ತಾ ಪ್ರಸಾರದ ಶಿಷ್ಯರಾಗಿ ಶುಭಸಂದೇಶವನ್ನು ಜಗತ್ತಿಗೆ ಸಾರುವಾಗ, ಈ ನಿಯೋಗವನ್ನು ಪವಿತ್ರಾತ್ಮದತ್ತ ಸತ್ಫಲಗಳಾದ ಆನಂದ, ಔದಾರ್ಯ ಮತ್ತು ವಿಶಾಲ ಮನಸ್ಸಿನಿಂದ ಮಾಡಬೇಕು (ಗಲಾ 5:22); ಯಾವುದೇ ಒತ್ತಡ, ಒತ್ತಾಯ ಅಥವಾ ಮತಾಂತರ ಭಾವನೆಯಿಂದಲ್ಲ, ಬದಲಿಗೆ, ದೇವರು ಇರುವ ಮತ್ತು ಕಾರ್ಯಸಾಧಿಸುವ ನಿಕಟತೆ, ಸಹಾನುಭೂತಿ ಮತ್ತು ಮೃದು ರೀತಿಯನ್ನು ಪ್ರತಿಬಿಂಬಿಸುವಂತೆ ನಾವು ಇದನ್ನು ಮಾಡಬೇಕು.

**2. "ವಿವಾಹ ಉತ್ಸವಕ್ಕೆ": ಇದು ಕ್ರಿಸ್ತರ ಮತ್ತು ಧರ್ಮಸಭೆಯ ಸೇವಾನಿಯೋಗದ ಯುಗಾಂತದ ಮತ್ತು ಪರಮಪ್ರಸಾದ ಸಂಸ್ಕಾರದ ಆಯಾಮ**

ಸಾಮತಿಯಲ್ಲಿ ರಾಜ ತನ್ನ ಕುಮಾರನ ವಿವಾಹ ಔತಣಕೂಟಕ್ಕೆ ಆಮಂತ್ರಣವನ್ನು ನೀಡಲು ಸೇವಕರನ್ನು ಕೇಳುತ್ತಾನೆ. ಆ ಔತಣ, ಯುಗಾಂತದ ಔತಣಕೂಟದ ಪ್ರತಿಬಿಂಬ ಹಾಗೂ ದೇವರ ಸಾಮ್ರಾಜ್ಯದ ಔತಣದ ಅಂತಿಮ ಚಿತ್ರಣ. ಮೆಸ್ಸಾಯ ಮತ್ತು ದೇವರ ಪುತ್ರ ಯೇಸುವಿನ ಆಗಮನ ಈಗಲೂ ನಮಗೆ ಯಥೇಚ್ಛವಾದ ಜೀವವನ್ನು ನೀಡುತ್ತಿದೆ (ಯೊವಾ 10:10), ಈ ಮಾತುಗಳು, 'ಸರ್ವೇಶ್ವರಸ್ವಾಮಿ ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡಿ, ಸಾರವತ್ತಾದ ಮೃಷ್ಟಾನ್ನವನ್ನೂ ಶ್ರೇಷ್ಟವಾದ ದ್ರಾಕ್ಷಾರಸವನ್ನೂ ಭೋಜನಕ್ಕಾಗಿ ಅಣಿಗೊಳಿಸುವರು' (ಯೆಶಾ 25:6-8) ಎಂಬುದನ್ನು ಸಂಕೇತಿಸುತ್ತದೆ.

ಯೇಸುವಿನ ಉಪದೇಶ ಕಾಲದ ಪರಿಪಕ್ವತೆಗೆ ಸಂಬಂಧಿಸಿದೆ, ಅದಕ್ಕಾಗಿಯೇ ಅವರು, "ಕಾಲವು ಪರಿಪಕ್ವವಾಗಿದೆ, ದೇವರ ಸಾಮ್ರಾಜ್ಯವು ಸಮೀಪಿಸಿದೆ" (ಮಾರ್ಕ 1:15) ಎಂದು ತಮ್ಮ ಬೋಧನೆಯ ಆರಂಭದಲ್ಲಿ ಹೇಳಿದರು. ಶಿಷ್ಯರು, ತಮ್ಮ ಪ್ರಭು ಮತ್ತು ಬೋಧಕರಾದ ಕ್ರಿಸ್ತರ ಈ ನಿಯೋಗಾದೇಶವನ್ನು ಮುಂದುವರಿಸಲು ಕರೆ ಹೊಂದಿದವರಾಗಿರುತ್ತಾರೆ. ಎರಡನೇ ವ್ಯಾಟಿಕನ್ ಮಹಾಸಮ್ಮೇಳನದ ಧರ್ಮಸಭೆಯ ಸುವಾರ್ತಾ ಪ್ರಸಾರ ಪಾತ್ರದ ಬೋಧನೆಯಲ್ಲಿ ಯುಗಾಂತದ ವಿಷಯದ ಬಗ್ಗೆ ಇರುವ ಬೋಧನೆಗಳನ್ನು ನಾವು ಇಲ್ಲಿ ಗಮನಿಸಬೇಸಬೇಕು: "ಸುವಾರ್ತೆ ಪ್ರಸಾರದ ಚಟುವಟಿಕೆಯ ಸಮಯ ಪ್ರಭುವಿನ ಮೊದಲ ಬರುವಿಕೆ ಮತ್ತು ಎರಡನೆಯ ಬರುವಿಕೆಯ ನಡುವೆ ವಿಸ್ತರಿಸಿದೆ... ಏಕೆಂದರೆ ಪ್ರಭು ಆಗಮಿಸುವ ಮೊದಲು ಎಲ್ಲಾ ಜನಾಂಗಗಳಿಗೆ ಶುಭಸಂದೇಶವನ್ನು ಪ್ರಕಟಿಸಬೇಕಾಗಿದೆ (ಮಾರ್ಕ 13:10)" (*ಆದ್ ಜೆನ್ತೆಸ್*, 9).

ಆದಿ ಧರ್ಮಸಭೆಯಲ್ಲಿದ್ದ ಕ್ರೈಸ್ತ ಸುವಾರ್ತಾ ಪ್ರಸಾರಕರ ಉತ್ಸಾಹ ಯುಗಾಂತಕ್ಕೆ ಸಂಬಂಧಿಸಿದ ಆಯಾಮವನ್ನು ಹೊಂದಿತ್ತು ಎಂದು ನಮಗೆ ತಿಳಿದಿದೆ. ಸುವಾರ್ತೆ ಸಾರುವ ಅತ್ಯವಸರವನ್ನು ಅವರು ಗ್ರಹಿಸಿದ್ದರು. ಇಂದು ಕೂಡ ಈ ದೃಷ್ಟಿಕೋನವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ; ಏಕೆಂದರೆ, ನಾವೆಲ್ಲರೂ ಕ್ರಿಸ್ತರೊಂದಿಗೆ ದೇವರ ಸಾಮ್ರಾಜ್ಯದ ವಿವಾಹ ಮಹೋತ್ಸವದಲ್ಲಿ ಭಾಗಿಯಾಗುವಾಗ, "ಪ್ರಭು ಸಮೀಪದಲ್ಲಿದ್ದಾರೆ" ಎಂಬ ಸಂತೋಷವನ್ನು ಹೊಂದಿದ್ದವರಲ್ಲಿದ್ದ ಹರುಷ ಹಾಗೂ ಗುರಿಯತ್ತ ಸಾಗಲು ಮುನ್ನುಗ್ಗುವ ಭರವಸೆ ಹೊಂದಿದ್ದವರ ಭರವಸೆ, ನಾವು ಸುವಾರ್ತೆಯನ್ನು ಸಾರಲು ನಮಗೆ ಸಹಾಯ ನೀಡುತ್ತದೆ.

ಜಗತ್ತು ನಮ್ಮ ಮುಂದೆ ಉಪಭೋಗತಾವಾದ, ಸ್ವಾರ್ಥಿ ಸೌಕರ್ಯ, ಸಂಪತ್ತಿನ ಕ್ರೋಢೀಕರಣ ಮತ್ತು ಪ್ರತ್ಯೇಕತಾವಾದ ಎಂಬ ವಿವಿಧ "ಔತಣಕೂಟ"ಗಳನ್ನು ಇರಿಸಿದರೆ, ಶುಭಸಂದೇಶ ಪ್ರತಿಯೊಬ್ಬರನ್ನು ದೇವರೊಂದಿಗೆ ಮತ್ತು ಇತರರೊಂದಿಗೆ ಸಹಭಾಗಿತ್ವದ ಸಂತೋಷ, ಪಾಲುಗಾರಿಕೆ, ನ್ಯಾಯ ಮತ್ತು ಭ್ರಾತೃತ್ವದಿಂದ ಕೂಡಿದ ದೈವಿಕ ಔತಣಕ್ಕೆ ಕರೆಯುತ್ತದೆ.

ಯಥೇಚ್ಛವಾದ ಜೀವ, ಕ್ರಿಸ್ತರ ಉಡುಗೊರೆಯಾಗಿದೆ; ಧರ್ಮಸಭೆ ಪ್ರಭುವಿನ ಆಜ್ಞೆಯ ಮೇರೆಗೆ ಅವರ ಸ್ಮರಣೆಗಾಗಿಯೇ ಆಚರಿಸುವ ಪರಮಪ್ರಸಾದದ ಔತಣಕೂಟದಲ್ಲಿ ಇಂದಿಗೂ ಇದನ್ನು ನಿರೀಕ್ಷಿಸಲಾಗುತ್ತದೆ. ಸುವಾರ್ತಾ ಬೋಧನೆಯ ನಮ್ಮ ಕಾಯಕದಲ್ಲಿ ನಾವು ತರುವ ಯುಗಾಂತ ಔತಣಕೂಟದ ಆಮಂತ್ರಣ, ಪ್ರಭು ತಮ್ಮ ವಾಕ್ಯ, ಶರೀರ ಮತ್ತು ರಕ್ತದಿಂದ ನಮ್ಮನ್ನು ಪೋಷಿಸುವ, ಪರಮಪ್ರಸಾದ ಸ್ವೀಕಾರ ಪೀಠದ ಆಮಂತ್ರಣಕ್ಕೆ ಅಂತರ್ಗತವಾಗಿ ಬೆಸೆದಿಕೊಂಡಿದೆ. ಪೋಪ್ 16ನೇ ಬೆನೆಡಿಕ್ಟ್ ಕಲಿಸಿದಂತೆ: “ಪ್ರತಿ ಬಲಿಪೂಜೆಯಾಚರಣೆ ಸಂಸ್ಕಾರಯುತವಾಗಿ ದೇವ ಜನರ ಯುಗಾಂತ ಔತಣಕೂಟದ ಸಭೆಯನ್ನು ನೆರವೇರಿಸುತ್ತದೆ. ನಮಗೆ ಬಲಿಪೂಜೆಯ ಔತಣ, ಪ್ರವಾದಿಗಳ ಮೂಲಕ ಮುನ್ಸೂಚಿಸಲಾದ ಅಂತಿಮ ಔತಣಕೂಟದ ನಿಜವಾದ ಮುನ್ಸೂಚನೆ (ಯೆಶಾ 25:6-9) ಮತ್ತು ಹೊಸ ಒಡಂಬಡಿಕೆಯಲ್ಲಿ ವಿವರಿಸಲಾದ ಹಾಗೂ ಸಂತರ ಅನ್ಯೋನತೆಯ ಸಂತೋಷದಲ್ಲಿ ಆಚರಿಸಲಾಗುವ ‘ಯಜ್ಞದ ಕುರಿಮರಿಯ ವಿವಾಹದ ಔತಣ’ (ಪ್ರಕ 19:9) ದ ಪೂರ್ವಾನುಭವವಾಗಿದೆ (*ಸಾಕ್ರಮೆಂತುಮ್ ಕಾರಿತಾತಿಸ್*, 31).

ಪರಿಣಾಮವಾಗಿ, ನಾವೆಲ್ಲರೂ ಪ್ರತಿ ಬಲಿಪೂಜೆಯ ಔತಣವನ್ನು ಅದರ ಎಲ್ಲಾ ಆಯಾಮಗಳಲ್ಲಿ ಮತ್ತು ನಿರ್ದಿಷ್ಟವಾಗಿ ಅದರ ಯುಗಾಂತ ಮತ್ತು ಸುವಾರ್ತಾ ಪ್ರಸಾರ ಆಯಾಮಗಳಲ್ಲಿ ಹೆಚ್ಚು ತೀವ್ರವಾಗಿ ಅನುಭವಿಸಲು ಕರೆಯಲಾಗಿದ್ದೇವೆ. ಈ ನಿಟ್ಟಿನಲ್ಲಿ, "ದೇವರ ಹೃದಯದಲ್ಲಿ ಪ್ರಾರಂಭವಾದ ಹಾಗೂ ಎಲ್ಲಾ ಜನರನ್ನು ತಲುಪಲು ಉದ್ದೇಶಿಸಿರುವ ಸೇವಾನಿಯೋಗದೆಡೆಗೆ ಆಕರ್ಷಿತರಾಗಾದೆ ನಾವು ಯಾರೂ ಬಲಿಪೂಜೆಯ ಪೀಠದೆಡೆಗೆ ಸಮೀಪಿಸಲು ಸಾಧ್ಯವಿಲ್ಲ" ಎಂದು ನಾನು ಹೇಳಿದ್ದನ್ನು ಪುನರುಚ್ಚರಿಸುತ್ತೇನೆ (*ಸಾಕ್ರಮೆಂತುಮ್ ಕಾರಿತಾತಿಸ್,* 84). ಕೋವಿಡ್ ನಂತರದ ಕಾಲದಲ್ಲಿ ಅನೇಕ ಸ್ಥಳೀಯ ಧರ್ಮಸಭೆಗಳು ಶ್ಲಾಘನಾರ್ಹವಾಗಿ ಪರಮಪ್ರಸಾದದ ಆಚರಣೆಯಲ್ಲಿ ನವೀಕರಣವನ್ನು ಪ್ರೋತ್ಸಾಹಿಸುತ್ತಿರುವುದು, ದೇವ ಪ್ರಜೆಗಳಲ್ಲಿ ಸುವಾರ್ತಾ ಪ್ರಸಾರ ಮನೋಭಾವವನ್ನು ಪುನರುಜ್ಜೀವಗೊಳಿಸುವುದಕ್ಕೆ ಅಗತ್ಯವಾಗಿದೆ. ಹಾಗಿದ್ದರೆ ಪ್ರತಿ ಬಲಿಪೂಜೆಯಲ್ಲಿ, “ಪ್ರಭೂ, ನಿಮ್ಮ ಮರಣವನ್ನು ಸಾರುತ್ತೇವೆ, ನೀವು ಮರಳಿ ಬರುವ ತನಕ, ನಿಮ್ಮ ಪುನರುತ್ಥಾನವನ್ನು ನಿವೇದಿಸುತ್ತೇವೆ” ಎಂದು ನಾವು ಎಷ್ಟು ಹೆಚ್ಚಿನ ವಿಶ್ವಾಸ ಮತ್ತು ಹೃತ್ಪೂರ್ವಕ ಹುಮ್ಮಸ್ಸಿನಿಂದ ಪಠಿಸಬೇಕಿದೆ.

2025ರ ಜೂಬಿಲಿ ಸಿದ್ಧತೆಯಾಗಿ ಪ್ರಾರ್ಥನೆಗೆ ಮೀಸಲಾಗಿರಿಸಿರುವ ಈ ವರ್ಷದಲ್ಲಿ, ಎಲ್ಲರೂ ಕಟಿಬದ್ಧರಾಗಿರಲು, ಅದಕ್ಕೂ ಮಿಗಿಲಾಗಿ, ಬಲಿಪೂಜೆಯಾಚರಣೆಯಲ್ಲಿ ಪಾಲ್ಗೊಳ್ಳಲು ಮತ್ತು ಧರ್ಮಸಭೆಯ ಸುವಾರ್ತಾ ಪ್ರಸಾರ ಕಾರ್ಯಕ್ಕಾಗಿ ಪ್ರಾರ್ಥಿಸಲು ನಿಮ್ಮನ್ನು ನಾನು ಪ್ರೋತ್ಸಾಹಿಸ ಬಯಸುತ್ತೇನೆ. ರಕ್ಷಕರ ಆಜ್ಞೆಗೆ ವಿಧೇಯರಾಗಿ ಧರ್ಮಸಭೆ, ಪ್ರತಿ ಬಲಿಪೂಜೆಯಲ್ಲಿ ಮತ್ತು ದಿನನಿತ್ಯ ಆರಾಧನಾ ವಿಧಿಗಳಲ್ಲಿ, "ಪ್ರಭು ಕಲಿಸಿದ ಪ್ರಾರ್ಥನೆ"ಯಲ್ಲಿ "ನಿಮ್ಮ ರಾಜ್ಯ ಬರಲಿ" ಎಂದು ಪ್ರಾರ್ಥಿಸುವುದನ್ನು ನಿಲ್ಲಿಸುವುದಿಲ್ಲ. ಈ ರೀತಿಯಾಗಿ, ನಮ್ಮ ದೈನಂದಿನ ಪ್ರಾರ್ಥನೆ ಮತ್ತು ನಿಖರವಾಗಿ, ಬಲಿಯರ್ಪಣೆ, ದೇವರಲ್ಲಿ ನಿತ್ಯ ಜೀವದೆಡೆಗೆ ಮತ್ತು ದೇವರೇ ತಮ್ಮ ಎಲ್ಲಾ ಮಕ್ಕಳಿಗಾಗಿ ಸಿದ್ಧಪಡಿಸಿದ ವಿವಾಹದ ಔತಣಕೂಟದೆಡೆಗೆ ಸಾಗುವ, ಭರವಸೆಯ ಯಾತ್ರಿಕರು ಮತ್ತು ಸುವಾರ್ತಾ ಪ್ರಸಾರಕರನ್ನಾಗಿ ನಮ್ಮನ್ನು ಮಾಡುತ್ತದೆ.

## 3. "ಎಲ್ಲರೂ". ಸಂಪೂರ್ಣ ಸಿನೊಡಲ್ ಮತ್ತು ಮಿಷನರಿ ಸಭೆಯಲ್ಲಿ ಕ್ರಿಸ್ತನ ಶಿಷ್ಯರ ಸಾರ್ವತ್ರಿಕ ಸುವಾರ್ತಾ ಪ್ರಸಾರ ನಿಯೋಗ

ಮೂರನೆಯ ಮತ್ತು ಕೊನೆಯ ಚಿಂತನೆ, ರಾಜನ ಆಹ್ವಾನವನ್ನು ಸ್ವೀಕರಿಸುವವರ ಬಗ್ಗೆ, ಅಂದರೆ, "ಎಲ್ಲರೂ". ನಾನು ಆಗಲೇ ಹೇಳಿದಂತೆ, ಇದು ಸುವಾರ್ತಾ ಪ್ರಸಾರ ನಿಯೋಗದ ಹೃದಯಭಾಗ: 'ಎಲ್ಲ' ಎಂಬುದು ಯಾರನ್ನೂ ಹೊರತುಪಡಿಸಿಲ್ಲ. ಸುವಾರ್ತಾ ಪ್ರಸಾರ ನಿಯೋಗದ ನಮ್ಮ ಪ್ರತಿಯೊಂದು ಕಾರ್ಯ ಎಲ್ಲರನ್ನೂ ತನ್ನೆಡೆಗೆ ಸೆಳೆಯುವ ಸಲುವಾಗಿ ಕ್ರಿಸ್ತನ ಹೃದಯದಿಂದ ಹುಟ್ಟಿದ್ದು" (*ಪಾಂಟಿಫಿಕಲ್ ಮಿಷನರಿ ಸೊಸೈಟಿಗಳ ಸಾಮಾನ್ಯ ಸಭೆ, 3 ಜೂನ್ 2023*).

ಇಂದು, ವಿಭಜನೆಗಳಿಂದ ಮತ್ತು ಘರ್ಷಣೆಗಳಿಂದ ಛಿದ್ರವಾಗಿರುವ ಜಗತ್ತಿನಲ್ಲಿ, ಕ್ರಿಸ್ತನ ಶುಭಸಂದೇಶ ಸೌಮ್ಯವಾದ ಆದರೆ, ದೃಢವಾದ ಧ್ವನಿಯಾಗಿ ಉಳಿದಿದೆ; ಅದು ವ್ಯಕ್ತಿಗಳು ಒಬ್ಬರನ್ನೊಬ್ಬರು ಎದುರುಗೊಳ್ಳಲು, ಅವರು ಸಹೋದರರು ಮತ್ತು ಸಹೋದರಿಯರೆಂದು ಗುರುತಿಸಿಕೊಳ್ಳಲು ಮತ್ತು ವೈವಿಧ್ಯತೆಯ ನಡುವೆ ಸಾಮರಸ್ಯದಿಂದ ಹರ್ಷಿಸಲು ಕರೆ ನೀಡುತ್ತದೆ. "ಎಲ್ಲಾ ಮಾನವರೂ ಸತ್ಯವನ್ನರಿತು ಜೀವೋದ್ಧಾರ ಪಡೆಯಬೇಕೆಂಬುದೇ ರಕ್ಷಕರಾದ ನಮ್ಮ ದೇವರ ಇಚ್ಛೆ." (1 ತಿಮೊ 2:4). ಹಾಗಾದರೆ, ನಮ್ಮ ಸುವಾರ್ತಾ ಪ್ರಸಾರ ನಿಯೋಗದ ಚಟುವಟಿಕೆಗಳಲ್ಲಿ ಎಲ್ಲರಿಗೂ ಸುವಾರ್ತೆಯನ್ನು ಸಾರಲು ನಮ್ಮನ್ನು ಕೇಳಿಕೊಳ್ಳಲಾಗಿದೆ ಎಂಬುದನ್ನು ನಾವು ಎಂದಿಗೂ ಮರೆಯದಿರೋಣ: "ಹೊಸ ಜವಾಬ್ದಾರಿಗಳನ್ನು ಹೊರಿಸುವಂತೆ ಕಂಡುಬರುವುದರ ಬದಲು, ನಾವು ನಮ್ಮ ಸಂತೋಷವನ್ನು ಹಂಚಿಕೊಳ್ಳಲು ಬಯಸುವ, ಸುಂದರವಾದ ದಿಗಂತವನ್ನು ತೋರಿಸುವ

ಮತ್ತು ಇತರರನ್ನು ರುಚಿಕರವಾದ ಔತಣಕೂಟಕ್ಕೆ ಆಹ್ವಾನಿಸುವ ಜನರಂತೆ ಕಾಣಿಸಿಕೊಳ್ಳಬೇಕು. " (*ಇವಾಂಜೆಲಿ ಗೌಡಿಯುಮ್*, 14).

ಕ್ರಿಸ್ತನ ಸುವಾರ್ತಾ ಪ್ರಸಾರ ನಿಯೋಗದ ಶಿಷ್ಯರು ಯಾವಾಗಲೂ ಎಲ್ಲಾ ವ್ಯಕ್ತಿಗಳ ಬಗ್ಗೆ, ಅವರ ಸಾಮಾಜಿಕ ಅಥವಾ ನೈತಿಕ ಸ್ಥಾನಮಾನ ಏನೇ ಇರಲಿ, ಹೃತ್ಪೂರ್ವಕ ಕಾಳಜಿಯನ್ನು ಹೊಂದಿದ್ದಾರೆ. ಔತಣಕೂಟದ ಸಾಮತಿ ನಮಗೆ ಹೇಳುತ್ತದೆ, ರಾಜನ ಆದೇಶದ ಮೇರೆಗೆ ಸೇವಕರು "ಒಳ್ಳೆಯ ಮತ್ತು ಕೆಟ್ಟ, ಕಂಡಕಂಡವರೆಲ್ಲರನ್ನು ಒಟ್ಟುಗೂಡಿಸಿದರು" (ಮತ್ತಾ 22:10). ಅದಕ್ಕಿಂತ ಹೆಚ್ಚಾಗಿ, "ಬಡವರು, ಅಂಗವಿಕಲರು, ಕುರುಡರು ಮತ್ತು ಕುಂಟರು" (ಲೂಕ 14:21), ಒಂದೇ ಮಾತಿನಲ್ಲಿ ಹೇಳುವುದಾದರೆ, ನಮ್ಮ ಸಹೋದರ ಸಹೋದರಿಯರಲ್ಲಿ ಕನಿಷ್ಠ, ಸಮಾಜ ಅಂಚಿಗೆ ತಳ್ಳಿರುವವರು, ರಾಜನ ವಿಶೇಷ ಅತಿಥಿಗಳಾದರು. ದೇವರು ಸಿದ್ಧಪಡಿಸಿದ ಅವರ ಪುತ್ರನ ವಿವಾಹ ಮಹೋತ್ಸವ ಎಲ್ಲರಿಗೂ ಯಾವಾಗಲೂ ತೆರೆದಿರುತ್ತದೆ, ಏಕೆಂದರೆ ನಮ್ಮಲ್ಲಿ ಪ್ರತಿಯೊಬ್ಬರ ಮೇಲೂ ಅವರ ಪ್ರೀತಿ ಅಪಾರ ಮತ್ತು ಷರತ್ತುರಹಿತ. "ದೇವರು ಲೋಕವನ್ನು ಎಷ್ಟಾಗಿ ಪ್ರೀತಿಸಿದರೆಂದರೆ, ತಮ್ಮ ಏಕೈಕ ಪುತ್ರನನ್ನೇ ಧಾರೆಯೆರೆದರು; ಆತನಲ್ಲಿ ವಿಶ್ವಾಸವಿಟ್ಟ ಯಾರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂಬುದೇ ದೇವರ ಉದ್ದೇಶ" (ಯೊವಾನ್ನ 3:16). ಪ್ರತಿಯೊಬ್ಬರೂ, ಪ್ರತಿಯೊಬ್ಬ ಪುರುಷ ಮತ್ತು ಪ್ರತಿಯೊಬ್ಬ ಮಹಿಳೆ, ರೂಪಾಂತರಗೊಳಿಸುವ ಮತ್ತು ರಕ್ಷಿಸುವ ಅವರ ಕೃಪೆಯಲ್ಲಿ ಪಾಲ್ಗೊಳ್ಳಲು ದೇವರಿಂದ ಆಹ್ವಾನಿಸಲಾದವರೆ. ಈ ಉಚಿತ ದೈವಿಕ ಉಡುಗೊರೆಗೆ ಎಲ್ಲರು "ಹೌದು" ಎಂದು ಹೇಳಬೇಕು; ಅದನ್ನು ಸ್ವೀಕರಿಸಿ ಮತ್ತು ಅದರ ಮೂಲಕ ರೂಪಾಂತರಗೊಳ್ಳಲು ಅವಕಾಶ ಮಾಡಿಕೊಟ್ಟು, ಅದನ್ನು "ವಿವಾಹದ ನಿಲುವಂಗಿ"ಯಂತೆ ಧರಿಸಬೇಕು (ಮತ್ತಾ 22:12).

"ಎಲ್ಲರ" ಸುವಾರ್ತಾ ಪ್ರಸಾರ ನಿಯೋಗಕ್ಕೆ "ಎಲ್ಲರ" ಬದ್ಧತೆ ಅಗತ್ಯ. ಶುಭಸಂದೇಶದ ಸೇವೆಯಲ್ಲಿ ನಾವು ಸಂಪೂರ್ಣ ಸಿನೊಡಲ್ ಮತ್ತು ಸುವಾರ್ತಾ ಪ್ರಸಾರ ನಿಯೋಗದ ಧರ್ಮಸಭೆ ಎಂಬುದರ ಕಡೆಗೆ ನಮ್ಮ ಪ್ರಯಾಣವನ್ನು ಮುಂದುವರಿಸಬೇಕು. 'ಸಿನೊಡಾಲಿಟಿ' ಮೂಲಭೂತವಾಗಿ "ಸುವಾರ್ತಾ ಪ್ರಸಾರ ಕಾರ್ಯ" ಮತ್ತು "ಸುವಾರ್ತಾ ಪ್ರಸಾರ ಕಾರ್ಯ" ಎಂಬುದು 'ಸಿನೊಡಾಲಿಟಿ', ಅಂದರೆ ಸುವಾರ್ತಾ ಪ್ರಸಾರ ನಿಯೋಗ ಯಾವಾಗಲೂ ಸಿನೊಡಲ್ ಕೂಡ. ಪರಿಣಾಮವಾಗಿ, ನಿಕಟ ಸುವಾರ್ತಾ ಪ್ರಸಾರ ನಿಯೋಗ ಸಹಕಾರ ಇಂದು ಜಾಗತಿಕ ಧರ್ಮಸಭೆಗೂ ಸ್ಥಳೀಯ ಧರ್ಮಸಭೆಗಳಿಗೂ ಹೆಚ್ಚು ತುರ್ತು ಮತ್ತು ಅತ್ಯವಶ್ಯಕ. ಎರಡನೇ ವ್ಯಾಟಿಕನ್ ಸಭೆ ಮತ್ತು ನನ್ನ ಪೂರ್ವ ಇದ್ದ ಪೋಪ್‌ಗಳ ಹೆಜ್ಜೆಗಳಲ್ಲಿ, ಪಾಂಟಿಫಿಕಲ್ ಮಿಷನ್ ಸೊಸೈಟಿಗಳ ಸೇವೆಯನ್ನು ಪ್ರಪಂಚದ ಎಲ್ಲಾ ಧರ್ಮಕ್ಷೇತ್ರಗಳಿಗೆ

ನಾನು ಶಿಫಾರಸ್ಸು ಮಾಡುತ್ತೇನೆ. ಪಾಂಟಿಫಿಕಲ್ ಮಿಷನ್ ಸೊಸೈಟಿಯ ಸೇವೆಗಳು, "ಕಥೋಲಿಕರು ಬಾಲ್ಯಾವಸ್ಥೆಯಿಂದ ನಿಜವಾದ ಸಾರ್ವತ್ರಿಕ ಮತ್ತು ಸುವಾರ್ತಾ ಪ್ರಸಾರ ದೃಷ್ಟಿಕೋನದಿಂದ ತುಂಬಿ, ಇದರ ಎಲ್ಲಾ ಕಾರ್ಯಾಚರಣೆಗಳ ಅಗತ್ಯಗಳಿಗೆ ಅನುಗುಣವಾಗಿ ಹಣವನ್ನು ಪರಿಣಾಮಕಾರಿಯಾಗಿ ಸಂಗ್ರಹಿಸುವ ಸಾಧನಗಳಾದ" ಪ್ರಾಥಮಿಕ ವಿಧಾನಗಳನ್ನು ಪ್ರತಿನಿಧಿಸುತ್ತಾರೆ (*ಆದ್ ಜೆಂತೆಸ್*, 38). ಈ ಕಾರಣದಿಂದ, ಎಲ್ಲಾ ಸ್ಥಳೀಯ ಚರ್ಚುಗಳಲ್ಲಿ ವಿಶ್ವ ಸುವಾರ್ತಾ ಪ್ರಸಾರ ದಿನದ ಸಂಗ್ರಹಣೆಗಳು ಸಂಪೂರ್ಣವಾಗಿ ಜಾಗತಿಕ ಐಕಮತ್ಯದ ಸಾರ್ವತ್ರಿಕ ನಿಧಿಗಾಗಿ ಉದ್ದೇಶಿಸಲಾಗುತ್ತದೆ ಮತ್ತು ಅದನ್ನು ವಿಶ್ವಾಸ ಪ್ರಸಾರದ ಜಾಗತಿಕ ಸಮುದಾಯ (*ವಿಶ್ವಾಸ ಪ್ರಸಾರದ ಜಾಗತಿಕ ಸಮುದಾಯದ ಪೋಂಟಿಫಿಕಲ್ ಸಭೆ*) ಆ ನಂತರ ಎಲ್ಲಾ ಧರ್ಮಸಭೆಗಳ ಸುವಾರ್ತಾ ನಿಯೋಗದ ಅಗತ್ಯಗಳಿಗಾಗಿ ಜಗದ್ಗುರುಗಳ ಹೆಸರಿನಲ್ಲಿ ವಿತರಿಸುತ್ತದೆ. ನಾವು ಹೆಚ್ಚು ಸಿನೊಡಲ್ ಮತ್ತು ಹೆಚ್ಚು ಸುವಾರ್ತಾ ಪ್ರಸಾರ ನಿಯೋಜಿತ ಧರ್ಮಸಭೆ ಆಗಲು ದೇವರು ನಮಗೆ ಮಾರ್ಗದರ್ಶನ ನೀಡಲಿ ಮತ್ತು ಸಹಾಯ ಮಾಡಲಿ ಎಂದು ಪ್ರಾರ್ಥಿಸೋಣ (*ಬಿಷಪ್‌ಗಳ ಸಿನೊಡ್‌ನ ಸಾಮಾನ್ಯ ಸಭೆಯ ಮುಕ್ತಾಯದ ಬಲಿಪೂಜೆಯ ಪ್ರಬೋಧನೆ, 29 ಅಕ್ಟೋಬರ್ 2023*).

ಅಂತಿಮವಾಗಿ, ಗಲಿಲೀಯದ ಕಾನಾದಲ್ಲಿ, ನಿಖರವಾಗಿ, ವಿವಾಹದ ಔತಣದಲ್ಲಿ ತಮ್ಮ ಮೊದಲ ಸೂಚಕಕಾರ್ಯವನ್ನು ಮಾಡಲು ಯೇಸುವನ್ನು ಕೇಳಿಕೊಂಡ ಮಾತೆ ಮರಿಯಳತ್ತ ನಮ್ಮ ದೃಷ್ಟಿಯನ್ನು ಎತ್ತೋಣ (ಯೊವಾ 2: 1-12). ಯುಗಾಂತ್ಯದಲ್ಲಿ ದೇವರು ಎಲ್ಲರಿಗಾಗಿ ಸಿದ್ದಪಡಿಸುವ ವಿವಾಹದ ಔತಣಕೂಟದ ಮುನ್ಸೂಚನೆಯಾಗಿ, ಪ್ರಭು ಆ ನವವಿವಾಹಿತರಿಗೆ ಮತ್ತು ಎಲ್ಲಾ ಅತಿಥಿಗಳಿಗೆ ಹೊಸ ದ್ರಾಕ್ಷಾರಸವನ್ನು ಹೇರಳವಾಗಿ ನೀಡಿದರು. ನಮ್ಮ ಕಾಲದಲ್ಲಿ ಕ್ರಿಸ್ತನ ಶಿಷ್ಯರು ಮಾಡುತ್ತಿರುವ ಸುವಾರ್ತಾ ಪ್ರಚಾರಕ್ಕಾಗಿ ಆಕೆಯ ಮಾತೃತ್ವಭರಿತ ಮಧ್ಯಸ್ಥಿಕೆಯನ್ನು ನಾವು ಬೇಡಿಕೊಳ್ಳೋಣ. ಸಂತೋಷ ಮತ್ತು ಪ್ರೀತಿಯ ಕಾಳಜಿ ಹೊಂದಿರುವ ನಮ್ಮ ಮಾತೆಯ ಕೋಮಲ ಹಾಗೂ ವಾತ್ಸಲ್ಯದಿಂದ ಹುಟ್ಟಿದ ಶಕ್ತಿಯೊಂದಿಗೆ (*ಇವಾಂಜೆಲಿ ಗೌಡಿಯುಮ್*, 288) ನಮ್ಮ ರಕ್ಷಕರಾದ ಅರಸನ ಆಹ್ವಾನವನ್ನು ಎಲ್ಲರಿಗೂ ತಲುಪಿಸಲು ನಾವು ಹೊರಡೋಣ. ಪರಿಶುದ್ದ ಮರಿಯೇ, ಸುವಾರ್ತಾ ಪ್ರಸಾರದ ನಕ್ಷತ್ರವೇ, ನಮಗಾಗಿ ಪ್ರಾರ್ಥಿಸಿರಿ!

*ರೋಮ್, ಸೇಂಟ್ ಜಾನ್ ಲ್ಯಾಟೆರನ್ ಬೆಸಿಲಿಕ, 25 ಜನವರಿ 2024, ಸಂತ ಪೌಲರ ಮನಪರಿವರ್ತನೆಯ ಹಬ್ಬ*

*ಫ್ರಾನ್ಸಿಸ್*